ಓ.ಎಸ್‌: 21/2019

ಪಿ.ಡಬ್ಲ್ಯೂ: 01

**<u>ದಿನಾಂಕಃ 18-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಮುಂದುವರೆದ ಪಾಟೀ ಸವಾಲು 1 ಮತ್ತು 5 ನೇ ಪ್ರತಿವಾದಿಗಳ ಪರ ಶ್ರೀ ಪಿ.ಎಂ.ವಿ. ವಕೀಲರಿಂದಃ</u>**

17. ರುದ್ರಪಶುಪತಿ ಕಮೀಟಿ ವಿರುದ್ಧ ಪ್ರಕರಣ ದಾಖಲಿಸಿರುವುದು ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಾಗೆಯ ಪೂರ್ವ ಭಾಗದಲ್ಲಿ ಇರುವ ದೇವಸ್ಥಾನದಲ್ಲಿ ಯಾರು ಪೂಜೆ ಮಾಡುತ್ತಾರೆ ಎಂದರೆ ಸಾಕ್ಷಿಯು ಅಲ್ಲಿ ದೇವಸ್ಥಾನ ಇರುವುದಿಲ್ಲ ಶೆಡ್ಡು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ದೇವಸ್ಥಾನದಲ್ಲಿ ಕಲ್ಲಪ್ಪ ಮಟ್ಟಿಹಾಳ ರವರು ಪೂಜೆ ಮಾಡುತ್ತಾರೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲಾತಿ ಪ್ರಕಾರ ಮಟ್ಟಿಹಾಳ ಕುಟುಂಬದವರು ಪೂಜೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಹಳೇ ಕೋಲ್ಹಾರದಲ್ಲಿ ಪೂಜೆ ಮಾಡುತ್ತಿದ್ದರು ದಾವಾ ಆಸ್ತಿಯಲ್ಲಿ ಪೂಜೆ ಮಾಡುತ್ತಿರುವುದಿಲ್ಲ ಎಂದು ನುಡಿಯತ್ತಾರೆ.

18. ನನ್ನ ಜಾಗೆಯ ಪೂರ್ವ ಭಾಗದಲ್ಲಿ ಇರುವ ದೇವಸ್ಥಾನದಲ್ಲಿ ಪೂಜೆ ಮತ್ತು ಕಾರ್ತಿಕೋತ್ಸವ ಜಾತ್ರೆ ಮಾಡುತ್ತಾರೆ ಎಂದರೆ ಸರಿಯಲ್ಲ. 1675 ಮತ್ತು 1672 ಎರಡು ರಾಚೋಟೇಶ್ವರ ದೇವಸ್ಥಾನಕ್ಕೆ ಸಂಬಂಧಪಟ್ಟ ಆಸ್ತಿ ಎಂದರೆ ಸರಿಯಲ್ಲ. ರಾಚೋಟೇಶ್ವರ ದೇವಸ್ಥಾನದ ಆಸ್ತಿಯನ್ನು ಎತ್ತಿಹಾಕುವ ಉದ್ದೇಶದಿಂದ ಸುಳ್ಳು ದಾಖಲಾತಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

19. ಸರ್ವೆ ನಂ.39/3/3 ಜಮೀನು ಕುಂಬಾರವರ ಮನೆತನಕ್ಕೆ ಸೇರಿದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಕುಂಬಾರ ಮನೆತನಕ್ಕೆ ರಾಚೋಟೇಶ್ವರ ಮನೆದೇವರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಭಕ್ತರು ಇರುತ್ತಾರೆ ಎಂದು ನುಡಿಯುತ್ತಾರೆ. ಕುಂಬಾರ ಮನೆತನ ವೈಯಕ್ತಿಕ ಆಸ್ತಿ ಇದ್ದು, ದೇವಸ್ಥಾನ ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಇರುವ ಆಸ್ತಿ ರಾಚೋಟೇಶ್ವರ ದೇವಸ್ಥಾನದ ಆಸ್ತಿ ಎಂದರೆ ಸರಿಯಲ್ಲ. ರಾಚೋಟೇಶ್ವರ ದೇವಸ್ಥಾನದ ಹಣವನ್ನು ರಾಜಕುಮಾರ ಶೀಲವಂತ ಮತ್ತು ಶಿವಾನಂದ ಶೀಲವಂತ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರ ಜೊತೆ ಮಿಲಾಪೆಯಾಗಿ ಹಣ

ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ದಿವಸ ರಾಜಕುಮಾರ ಶೀಲವಂತ ನಮ್ಮ ಜೊತೆ ಬಂದಿರುತ್ತಾರೆ ಎಂದರೆ ಸಾಕ್ಷಿಯು ನ್ಯಾಯಾಲಯಕ್ಕೆ ಬಂದಿರುತ್ತಾರೆ ಯಾವ ಕಾರಣಕ್ಕಾಗಿ ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

20. ರಾಜಕುಮಾರ ಶೀಲವಂತ ಮತ್ತು ಶಿವಾನಂದ ಶೀಲವಂತ ಆಸ್ತಿಗೆ ನಾವು ಮಾಲಕರು ಎಂದು ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.39/3/3 ರಲ್ಲಿ ವೀರಭದ್ರೇಶ್ವರ ದೇವಸ್ಥಾನ ಕಟ್ಟಲಾಗಿರುತ್ತದೆ ಎಂದು ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಹಾಜರುಪಡಿಸುವ ಅವಶ್ಯಕತೆ ಇಲ್ಲದ ಕಾರಣ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿದ ದಾಖಲಾತಿಗಳ ಪ್ರಕಾರ 1675 ಮತ್ತು 1672 ರ ಆಸ್ತಿಯ ಬಗ್ಗೆ ತೀರ್ಮಾಣವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳ ಬಗ್ಗೆ ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಡಿ-76 ನನ್ನ ಆಸ್ತಿಯ ಪೂರ್ವ ಭಾಗಕ್ಕೆ ಆಸ್ತಿಯನ್ನು ನೀಡಿದ್ದರು ಸಹ ನನ್ನ ಆಸ್ತಿಯ ಪಕ್ಕದಲ್ಲಿ ನೀಡಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

21. 6 ನೇ ಪ್ರತಿವಾದಿಯು ರಾಚೋಟೇಶ್ವರ ದೇವಸ್ಥಾನಕ್ಕೆ ಆಸ್ತಿಯನ್ನು ನೀಡಿದ್ದು, ಸದರಿ ಆಸ್ತಿಯ ಮೇಲೆ ಪ್ರತಿವಾದಿಯು ವಿದ್ಯುತ್ ಸಂಪರ್ಕವನ್ನು ಪಂಚಾಯಿತಿಯಿಂದ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ರಾಚೋಟೇಶ್ವರ ದೇವಸ್ಥಾನದ ಆಸ್ತಿಯ ಚಕಬಂದಿ ಪೂರ್ವಕ್ಕೆ ಮೀನುಗಾರ ಸಂಘ, ಪ-ನನ್ನ ಆಸ್ತಿ, ದ-ಹನುಮಾನ ದೇವಸ್ಥಾನ, ಉ- ರಸ್ತೆ ಎಂದು ಚಕಬಂದಿ ಇರುತ್ತದೆ ಎಂದರೆ ಸರಿಯಲ್ಲ. ರಾಚೋಟೇಶ್ವರ ದೇವಸ್ಥಾನದವರು ತಮಗೆ ನೀಡಿದ ಆಸ್ತಿಯನ್ನು ಅಳತೆ ಮಾಡಿಕೊಡಬೇಕೆಂದು 6 ನೇ ಪ್ರತಿವಾದಿಗೆ ಅರ್ಜಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನನ್ನ ವಾದ ಪತ್ರದಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ಅರ್ಜಿ ಸಲ್ಲಿಸಿದಕ್ಕೆ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ,

ಸಾಕ್ಷಿ ಮುಂದುವರೆದು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ದಾವೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

22. ಪ್ರತಿವಾದಿಯರು ಪೂ-ಪ ಕ್ಕೆ 15 ಫೂಟ ಒತ್ತುವರಿ ಮಾಡಿರುತ್ತಾರೆ. ಸದರಿ ವಿಷಯವನ್ನು ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ಸದರಿ ಒತ್ತುವರಿಯಾದ ಬಗ್ಗೆ ಹಾತ್ ನಕಾಶೆಯಲ್ಲಿ ತೋರಿಸಿರುತ್ತೇನೆ. ಕಬ್ಜೆಯಲ್ಲಿ ಇದ್ದ ಬಗ್ಗೆ ವಕೀಲರಿಗೆ ತಿಳಿಸಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಒತ್ತುವರಿ ಮಾಡಲು ಪ್ರಯತ್ನಿಸಿರುತ್ತಾರೆ ಎಂದು ತಿಳಿಸಿರುತ್ತೇನೆ. ಒತ್ತುವರಿ ಮಾಡಿರುತ್ತಾರೆ ಎಂದು ದಾವೆ ಸಲ್ಲಿಸಿರುವುದಿಲ್ಲ. ಒತ್ತುವರಿ ಮಾಡಲು ಪ್ರಯತ್ನಪಟ್ಟಿರುವ ಕಾರಣ ದಾವೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಒತ್ತುವರಿ ಮಾಡಿದ ಬಗ್ಗೆ ಹಾತ್ ನಕಾಶೆಯಲ್ಲಿ ತೋರಿಸಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಒತ್ತುವರಿ ಮಾಡುತ್ತಿದ್ದಾರೆ ಎಂದು JEIF ಎಂದು ತೋರಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಆಸ್ತಿಯನ್ನು ಬಿಟ್ಟು JEIF ನು ತೋರಿಸಿರುತ್ತೇನೆ ಎಂದರೆ ಸಾಕ್ಷಿಯು ನಕಾಶೆಯಲ್ಲಿ ವಿಸ್ತೀರ್ಣ ತಪ್ಪಾಗಿ ನಮೂದಿಸಿದ್ದು, JEIF ನನ್ನ ಜಾಗದಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ಪೂ-ಪ ಒಟ್ಟು 97 ಫೂಟ ಇರುತ್ತದೆ. 37+59 ಒಟ್ಟು 97 ಫೂಟ ಆಗುತ್ತದೆ. ನಾನು ಹಾಜರುಪಡಿಸಿದ ನಕಾಶೆಯ ಪ್ರಕಾರ JEIF 97 ಫೂಟ ಬಿಟ್ಟು ಇರುತ್ತದೆ ಎಂದರೆ ಸರಿಯಲ್ಲ. JEIF ಆಸ್ತಿಗೆ ನಾನು ಮಾಲಕನು ಎಂದು ಕೇಳಿರುವುದಿಲ್ಲ, ಸಾಕ್ಷಿ ಮುಂದುವರೆದು ನಾನೆ ಮಾಲಿಕನು ಆಗಿರುವ ಕಾರಣ ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. 97+15 ಒಟ್ಟು 112 ಆಗುತ್ತದೆ. ನಾನು ಪೂ-ಪ 112 ಫೂಟಿಗೆ ಮಾಲೀಕನು ಆಗಿರುವುದಿಲ್ಲ. ನಾನು ಪೂರ್ವ ದಿಕ್ಕಿಗೆ 97 ಫೂಟ ಬಿಟ್ಟು ಆಸ್ತಿಗೆ ಮಾಲೀಕನು ಇಲ್ಲದಿದ್ದರು ಸಹ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

23. ಆಸ್ತಿ ನಂ.1672 ಮತ್ತು 1675 ಕ್ಕೆ ಸಂಬಂಧ ಇಲ್ಲದಿದ್ದರು ಸಹ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಆಸ್ತಿಗೆ ಪ್ರತಿವಾದಿಯರು ತೊಂದರೆ ಕೊಡದೆ ಇದ್ದರು ಸಹ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಆಸ್ತಿಯಲ್ಲಿ ಪೂರ್ಣ ಪ್ರಮಾಣದ ಕಟ್ಟಡ ಇದ್ದರು ಸಹ

ಪೂರ್ವ ದಿಕ್ಕಿಗೆ ಖುಲ್ಲಾ ಜಾಗೆ ಇರುತ್ತದೆ ಎಂದು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ವಸ್ತು ಸ್ಥಿತಿ ತೋರಿಸುವ ಸಲುವಾಗಿ ಫೋಟೋವನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಅವಶ್ಯಕತೆ ಬಿದ್ದರೆ ಹಾಜರುಪಡಿಸತ್ತೇನೆ ಎಂದು ನುಡಿಯುತ್ತಾರೆ. ನನ್ನ ಆಸ್ತಿ ಮತ್ತು ಪ್ರತಿವಾದಿಯರ ಆಸ್ತಿಯನ್ನು ಅಳತೆ ಮಾಡಲು ನ್ಯಾಯಾಲಯದಿಂದ ಕಮೀಷನರ ನೇಮಿಸಲು ಯಾವುದೇ ತೊಂದರೆ ಇರುವುದಿಲ್ಲ. ನನ್ನ ಆಸ್ತಿಯನ್ನು ಅಳತೆ ಮಾಡಲು ಕೊಡದೆ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**